<u>ದಿನಾಂಕಃ 19-12-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- ಎದುರುದಾರ ಪರಃ ಶ್ರೀ ಪಿ.ಇ.ಎಸ್. ವಕೀಲರಿಂದಃ-</u>

ಮೃತ ನನ್ನ ಮಗ ತಿರುಪತಿ ಎದುರುದಾರನ ತೋಟದಲ್ಲಿ ಕೆಲಸ ಮಾಡುತ್ತಿದ್ದ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಮೇಸ್ತ್ರಿ ಕೃಷ್ಣ ಈತ ತೋಟದ ಮಾಲೀಕರ ಬಳಿ ಕೂಲಿ ಆಳುಗಳನ್ನ ಕರೆತಂದು ಕೆಲಸ ಮಾಡಿಸಲು ಕರಾರು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಕೃಷ್ಣಾಮೇಸ್ತ್ರಿ ಇವರ ಲೆಕ್ಕಾಚಾರದಲ್ಲಿ ನನ್ನ ಮಗ ಎದುರುದಾರನ ತೋಟದಲ್ಲಿ ಕೆಲಸ ಮಾಡುತ್ತಿದ್ದ ಎನ್ನುತ್ತಾರೆ. ಮೇಸ್ತ್ರಿ ಕೃಷ್ಣ ಈತ ಕೂಲಿ ಆಳುಗಳನ್ನ ತೋಟಕ್ಕೆ ಕರೆದುಕೊಂಡು ಬರಲು ಸಂಪೂರ್ಣ ಜವಾಬ್ದಾರಿ ವಹಿಸಿಕೊಳ್ಳುತ್ತಿದ್ದ ಎಂದರೆ ಸರಿ. ಮೇಸ್ತ್ರಿ ಕೃಷ್ಣ ಈತನೇ ನಮ್ಮನ್ನ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದ ಮತ್ತು ಆತನೇ ಕೂಲಿ ಮೊತ್ತವನ್ನ ನಮ್ಮೊಡನೆ ನಿರ್ಧರಿಸುತ್ತಿದ್ದ ಮತ್ತು ಆತನೇ ಕೂಲಿ ಕೊಡುತ್ತಿದ್ದ ಎಂದರೆ ಸರಿ. ಮೇಸ್ತ್ರಿ ಕೃಷ್ಣ ಈತ ಯಾವ ತೋಟದಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತಿದ್ದನೋ ಆ ತೋಟದಲ್ಲಿ ಕೂಲಿ ಕಾರ್ಮಿಕರು ಕೆಲಸ ಮಾಡಬೇಕಿತ್ತು ಎಂದರೆ ಸರಿ. ಮೇಸ್ತ್ರಿ ಕೃಷ್ಣ ನಮ್ಮನ್ನ ತಮಿಳುನಾಡಿನಿಂದ ಕೆಲಸಕ್ಕೆ ಕರೆದುಕೊಂಡು ಬರುವಾಗ ಮುಂಗಡ ಹಣ ಕೊಟ್ಟು ಕರಾರು ಮಾಡಿಕೊಂಡು ಕೆಲಸಕ್ಕೆ ಕರೆದುಕೊಂಡು ಬರುತ್ತಿದ್ದ ಎಂದರೆ ಸಾಕ್ಷಿ ಮುಂಗಡ ಹಣ ಕೊಡುತ್ತಿದ್ದ ಆದರೆ ಯಾವುದೇ ಕರಾರು ಹಾಕುತ್ತಿರಲಿಲ್ಲ ಎನ್ನುತ್ತಾರೆ. ಮೇಸ್ತ್ರಿ ಕೃಷ್ಣ ತೋಟದ ಮಾಲೀಕರ ಬಳಿ ಎಷ್ಟು ಕಾರ್ಮಿಕರನ್ನ ಬಿಡಬೇಕು ಮತ್ತು ಅವರ ಕೂಲಿ ಮೊತ್ತದ ಬಗ್ಗೆ

ಮಾತನಾಡಿಕೊಳ್ಳುತ್ತಿದ್ದ ಎಂದರೆ ಸರಿ. ಕಾರ್ಮಿಕರಿಗೆ ಕೆಲಸ ಮಾಡುವಾಗ ಏನಾದರೂ ಪೆಟ್ಟಾದರೆ ಆತನೇ ಚಿಕಿತ್ಸೆ ಕೊಡಿಸುವ ಜವಾಬ್ದಾರಿ ವಹಿಸಿಕೊಂಡಿದ್ದ ಎಂದರೆ ಸರಿ. ನನ್ನ ಮಗ ತೀರಿಕೊಂಡ ವರ್ಷದಲ್ಲಿ ಕೃಷ್ಣಾಮೇಸ್ತ್ರಿ ಯಾವ ಯಾವ ತೋಟದಲ್ಲಿ ಕಾರ್ಮಿಕರನ್ನ ಬಿಟ್ಟಿದ್ದ ಎಂದು ನನಗೆ ಗೊತ್ತಿಲ್ಲ. ಮೇಸ್ತ್ರಿ ಕೃಷ್ಣ ಈತ ಎಲ್ಲಿಗೆ ಕೆಲಸಕ್ಕೆ ಹೋಗಬೇಕು ಎಂದು ಹೇಳುತ್ತಿದ್ದನೋ ಅಲ್ಲಿಗೆ ಹೋಗಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವು ಎದುರುದಾರನ ತೋಟದಲ್ಲಿ ಮಾತ್ರ ಕೆಲಸ ಮಾಡುತ್ತಿದ್ದೆವು ಎನ್ನುತ್ತಾರೆ. ಘಟನೆ ನಡೆಯಿತು ಎನ್ನಲಾದ ತೋಟದ ಮಾಲೀಕನ ಹೆಸರು ಜಗನ್ ಅಥವಾ ಜಗದೀಶ ಎನ್ನುತ್ತಾರೆ. ತೋಟದ ಮಾಲೀಕನ ತಂದೆ ಹೆಸರು ನನಗೆ ಗೊತ್ತಿಲ್ಲ. ಘಟನೆ ನಡೆಯಿತು ಎನ್ನಲಾದ ಎಸ್ಟೇಟ್ ನ ಹೆಸರು ಅನ್ನಪೂರ್ಣ ಎಸ್ಟೇಟ್ ಎಂದರೆ ಸಾಕ್ಷಿ ಜಗನ್ ಎಸ್ಟೇಟ್ ಎನ್ನುತ್ತಾರೆ. ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ದಾಖಲೆಗಳನ್ನ ಸೃಷ್ಟಿ ಮಾಡಿ ತಂದು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗ ಬೇರೆ ಕಡೆ ಗಾಯಗೊಂಡು ತೀರಿಕೊಂಡಿದ್ದು ಅದನ್ನ ದುರುಪಯೋಗಪಡಿಸಿಕೊಂಡು ಎದುರುದಾರನ ವಿರುದ್ಧ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮೇಸ್ತ್ರಿ ಕೃಷ್ಣ ಈತನನ್ನ ಈ ಅರ್ಜಿಯಲ್ಲಿ ಪಕ್ಷಗಾರನಾಗಿ ಮಾಡಿಲ್ಲ ಎಂದರೆ ಸರಿ. ಮೇಸ್ತ್ರಿ ಕೃಷ್ಣ ಈತ ನನಗೆ ಪರಿಹಾರ ಕೊಡಲು ಭಾಧ್ಯಸ್ಥ ಎಂದರೆ ಸಾಕ್ಷಿ ಆತ ಕೂಲಿ ಹಣವನ್ನ ಕೊಟ್ಟಿದ್ದಾನೆ ಎನ್ನುತ್ತಾರೆ.

ಇ.ಸಿ.ಎ.ನಂಃ 15/2023
ಪಿ.ಡಬ್ಲ್ಯೂಃ 1

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

ಇ.ಸಿ.ಎ.ನಂಃ 15/2023
ಪಿ.ಡಬ್ಲ್ಯೂಃ 1